ವಿಷಯ: ವಿವಿಧ ಸರ್ಕಾರಿ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳು

2826 (3923)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಸರ್ಕಾರಿ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳೆಷ್ಟು;

ಆ) ಅಂತಹ ಹುದ್ದೆಗಳು ಎಷ್ಟು ವರ್ಷದಿಂದ ಖಾಲಿ ಇವೆ;

ಇ) ಇವುಗಳ ಭರ್ತಿಗಾಗಿ ಸರ್ಕಾರದ ಕ್ರಮವೇನು?

ಶ್ರೀ ಜೆ.ಹೆಚ್.ಪಟೀಲ್ (ಮುಖ್ಯಮಂತ್ರಿಗಳು):

ಅ) 1996-97ರವರೆಗೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳು 93,817 ಇರುತ್ತದೆ.

ಆ) ಈ ಮಾಹಿತಿಯು ಕೂಡಲೇ ಲಭ್ಯವಿರುವುದಿಲ್ಲ.

ಇ) ನೇರ ನೇಮಕಾತಿ ನಿರ್ಬಂಧವನ್ನು ದಿನಾಂಕ 6-11-1993 ರಿಂದ ರದ್ದು ಗೊಳಿಸಲಾಗಿದೆ. ಅವಶ್ಯವಿರುವ ಕಡೆ, ನೇರ ನೇಮಕಾತಿ ಮಾಡಲು ಮಿತವ್ಯಯ ಆದೇಶನ್ನು ಸಡಿಲಿಸಿಕೊಂಡು ನೇರ ನೇಮಕಾತಿ ರಿಕ್ತ ಸ್ಥಾನಗಳನ್ನು ತುಂಬಲು ಸಂಬಂಧಿಸಿದ ಇಲಾಖೆಗಳು ಕ್ರಮ ಕೈಗೊಳ್ಳಬೇಕಾಗುತ್ತಿದೆ.

ವಿಷಯ: ತುಮಕೂರು ತಾಲ್ಲೂಕು ಹೆಬ್ಬೂರು ಪೊಲೀಸ್ ಠಾಣೆಯಲ್ಲಿನ ಪೊಲೀಸ್ ಕಾನ್ಸ್‌ಟೇಬಲ್‌ಗಳಿಗೆ ವಸತಿ ಸೌಕರ್ಯ.

2827 (3921)

ಶ್ರೀ ಎಸ್.ವಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ತಾಲ್ಲೂಕು ಹೆಬ್ಬೂರು ಪೊಲೀಸ್ ಠಾಣೆಯಲ್ಲಿರುವ ಕಾನ್ಸ್‌ಟೇಬಲ್‌ಗಳಿಗೆ ವಸತಿ ಸೌಕರ್ಯ ಕಲ್ಪಿಸುವ ಯೋಜನೆಯು ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಸೌಕರ್ಯ ಕಲ್ಪಿಸಲಾಗುವುದು?